# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 690 (725) |
| ಸದಸ್ಯರ ಹೆಸರು | : ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 10.03.2026 |
| ಉತ್ತರಿಸುವ ಸಚಿವರು | : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸಾರ್ವಜನಿಕ ವಲಯ ಉದ್ಯಮಗಳ ಇಲಾಖೆಯ ಅಧೀನದಲ್ಲಿ ಬರುವ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ ಸಂಸ್ಥೆಗೆ ಈ ಹಿಂದೆ ಕಲಬುರಗಿಯಲ್ಲಿ ಗೋದಾಮು ನಿರ್ಮಿಸಲು Lease Cum Sale Agreement ಆಧಾರದ ಮೇಲೆ ಒಂದು ಎಕರೆ ಜಮೀನು ಕೆ.ಐ.ಎ.ಡಿ.ಬಿ ವತಿಯಿಂದ ನೀಡಲಾಗಿತ್ತು; ಆದರೆ, ಎಂ.ಎಸ್.ಐ.ಎಲ್ ವತಿಯಿಂದ ನಿಗಧಿತ ಸಮಯದಲ್ಲಿ ಕಟ್ಟಡ ಪೂರ್ಣಗೊಳಿಸದೇ ಇರುವುದರಿಂದ ಏಪ್ರಿಲ್ 2016 ರಿಂದ ಸೆಪ್ಟೆಂಬರ್ - 2023 ರವರೆಗೆ ಸುಮಾರು 76 ಲಕ್ಷ ರೂ. ಗಳನ್ನು ಬಾಡಿಗೆ ರೂಪದಲ್ಲಿ ಕೆ.ಐ.ಎ.ಡಿ.ಬಿ. ಪಾವತಿಸಿರುವುದು ನಿಜವೇ; | ಏಪ್ರಿಲ್ 2016 ರಿಂದ 2023 ರವರೆಗೆ ಕೆ.ಐ.ಎ.ಡಿ.ಬಿ ಗೆ ಯಾವುದೇ ಹಣವನ್ನು ಬಾಡಿಗೆ ರೂಪದಲ್ಲಿ ಎಂ.ಎಸ್.ಐ.ಎಲ್ ಪಾವತಿಸಿರುವುದಿಲ್ಲ. |
| (ಆ) | ಈ ಹಿಂದೆ 2020ನೇ ಸಾಲಿನಲ್ಲಿ ವಾಸ್ತುಶಿಲ್ಪಗಳು ಸರಿಯಾದ Estimates ತಯಾರಿಸದೇ ಇದ್ದುದರಿಂದ ಸಂಸ್ಥೆಗೆ ಹೆಚ್ಚುವರಿಯಾಗಿ 1.88 ಕೋಟಿ ರೂ.ಗಳ ಆರ್ಥಿಕ ಹೊರೆ ಆಗುವುದಲ್ಲದೇ ಪರಿಷ್ಕೃತ ಕಾರ್ಯಾದೇಶ ನೀಡಲಾಗಿತ್ತು ಎಂಬ ಮಾಹಿತಿಯು ನಿಜವೇ; | 20.08.2018 ರಂದು ನಡೆದ ಎಂ.ಎಸ್.ಐ.ಎಲ್ ಸಂಸ್ಥೆಯ 315 ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಕಲಬುರ್ಗಿಯ ಕಪನೂರು ಕೈಗಾರಿಕಾ ಪ್ರದೇಶದಲ್ಲಿ ಅಂದಾಜು ರೂ.3.00 ಕೋಟಿ ವೆಚ್ಚದಲ್ಲಿ ಗೋದಾಮು ನಿರ್ಮಾಣಕ್ಕೆ ಅನುಮೋದನೆ ನೀಡಿತ್ತು. ಅದರಂತೆ, ಪ್ರಮುಖ ಪತ್ರಿಕೆಗಳಲ್ಲಿ ಇ-ಟೆಂಡರ್ ಕರೆಯಲಾಗಿತ್ತು. ಇದರಲ್ಲಿ 5 ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕ ಮತ್ತು ಹಣಕಾಸು ಬಿಡ್‌ಗಳನ್ನು ಸಮಾಲೋಚನಾ ಸಮಿತಿಯ ಮುಂದೆ ಇಡಲಾಯಿತು. ಕನಿಷ್ಠ ಬಿಡ್ ರೂ.2,97,80,566.33 ಸಲ್ಲಿಸಿದ ಶ್ರೀ ಮಂಜುನಾಥ್ ಎಚ್.ಎಸ್. ರವರೊಂದಿಗೆ ದರ ಸಂಧಾನ ನಂತರ ಅವರಿಗೆ 05.07.2019 ರಂದು ರೂ.2.90 ಕೋಟಿಗಳ ಕಾರ್ಯಾದೇಶ ನೀಡಲಾಗಿತ್ತು.<br><br>ಕಾಮಗಾರಿ ಆದೇಶದ ದಿನಾಂಕದಿಂದ 14 ತಿಂಗಳೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಷರತ್ತು ವಿಧಿಸಲಾಗಿತ್ತು. |

| | | |
|---|---|---|
| | | ಆದರೆ, ಕೆಲವು ಕಾಮಗಾರಿಗಳನ್ನು ಬಿಟ್ಟು ಮೇಲ್ಕಂಡ ಟೆಂಡರ್ ನ್ನು ಕರೆಯಲಾಗಿತ್ತು. ಆದ್ದರಿಂದ, ಸೆಪ್ಟೆಂಬರ್ 21, 2021 ರಂದು ನಡೆದ 328 ನೇ ಮಂಡಳಿಯ ಸಭೆಯಲ್ಲಿ, ಗೋದಾಮಿನ ನಿರ್ಮಾಣವನ್ನು ಪೂರ್ಣಗೊಳಿಸಲು ರೂ.1,87,78,927/- + ಜಿಎಸ್‌ಟಿ ಹೆಚ್ಚುವರಿ ವೆಚ್ಚವನ್ನು ಮಂಡಳಿಯು ಅನುಮೋದಿಸಿತ್ತು. ಅದರಂತೆ, ಪರಿಷ್ಕೃತ ಕಾರ್ಯಾದೇಶವನ್ನು ದಿನಾಂಕ: 17.10.2020 ರಂದು ಶೋಭಾ ಅಂಡ್ ಮಹೇಶ್ ಅಸೋಸಿಯೇಟ್ಸ್ ವಾಸ್ತುಶಿಲ್ಪಿಗಳು, ಇವರಿಗೆ ನೀಡಲಾಗಿತ್ತು.<br><br>ಈ ಯೋಜನೆಯ ಒಟ್ಟು ವೆಚ್ಚ ರೂ.4,87,77,497.50 ಗಳಾಗಿರುತ್ತದೆ. ಇದರಿಂದ ಸಂಸ್ಥೆಗೆ ಯಾವುದೇ ಆರ್ಥಿಕ ನಷ್ಟ ಅಥವಾ ಹೊರೆ ಆಗಿರುವುದಿಲ್ಲ. |
| (ಇ) | ಸದರಿ ಕಾಮಗಾರಿ ಇಷ್ಟೊಂದು ವಿಳಂಬವಾಗುವುದಕ್ಕೆ ಕಾರಣಗಳೇನು ಮತ್ತು ಸದರಿ ಗೋದಾಮು ನಿರ್ಮಾಣ ಕಾಮಗಾರಿಯ ಪ್ರಸ್ತುತ ಹಂತವೇನು? (ಮಾಹಿತಿ ನೀಡುವುದು) | 2002 ರಿಂದ 2010ರ ಅವಧಿಯಲ್ಲಿ ಕಂಪನಿಯ ಪ್ರಮುಖ ವ್ಯವಹಾರಗಳಾದ ಸಾರಾಯಿ, ಸಗಟು ಮದ್ಯ, ಲಾಟರಿ, ವಿಮಾನ ಸರಕು, ಕಂತು ಖರೀದಿ ಇತ್ಯಾದಿ ಚಟುವಟಿಕೆಗಳನ್ನು ಕ್ರಮೇಣ ಕಳೆದುಕೊಂಡ ಹಿನ್ನೆಲೆಯಲ್ಲಿ ಕಂಪನಿ ಆರ್ಥಿಕ ಸಂಕಷ್ಟಕ್ಕೆ ಒಳಗಾಯಿತು. ಈ ಹಿನ್ನೆಲೆಯಲ್ಲಿ 2006-07ನೇ ಸಾಲಿನಲ್ಲಿ ಕಂಪನಿ ಶೂನ್ಯ ಬಜೆಟ್ ನ ಪರಿಸ್ಥಿತಿಗೆ ತಲುಪಿದ ಕಾರಣ ಹೆಚ್ಚಿನ ಹಣಕಾಸು ಬಾಧ್ಯತೆ ಇರುವ ಯೋಜನೆಗಳನ್ನು ತಕ್ಷಣ ಕೈಗೊಳ್ಳುವುದು ಸಾಧ್ಯವಾಗಿರಲಿಲ್ಲ.<br><br>ಈ ಗೋದಾಮು ಇರುವ ಸ್ಥಳವು ನಿರ್ಜನ ಪ್ರದೇಶದಲ್ಲಿ ಜನಸಂದಣಿ ಇಲ್ಲದ ಪ್ರದೇಶದಲ್ಲಿದ್ದು, ಹಂಚಿಕೆಯಾದಾಗ ಸಂಸ್ಥೆಗೆ ಪೂರಕವಾಗಿಲ್ಲದ ಪ್ರದೇಶವಾಗಿತ್ತು. ಸಂಸ್ಥೆಯ ಆರ್ಥಿಕ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಕಾಮಗಾರಿಯನ್ನು ಹಂತ ಹಂತವಾಗಿ ಪ್ರಾರಂಭಿಸಿರುವುದರಿಂದ ವಿಳಂಬವಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿದ್ದು, ವಿದ್ಯುತ್ ಸಂಪರ್ಕ ಪಡೆಯಲು ಕ್ರಮ ಕೈಗೊಳ್ಳಲಾಗಿರುತ್ತದೆ. ಪ್ರಸ್ತುತ ಬಾಡಿಗೆಗೆ ಇರುವ ಗೋದಾಮನ್ನು ಈ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಿ ಉಪಯೋಗಿಸಿಕೊಳ್ಳಲಾಗುವುದು. |

ಸಿಐ 43 ಸಿಎಂಐ 2026 (ಇ)

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು